# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ದೇವರಾಜ | P.W | 37 |
| ತಂದೆಯ ಹೆಸರು | ವೆಂಕಟಯ್ಯ | C.W | 15 |
| ವಯಸ್ಸು | 46 ವರ್ಷ | | |
| ಉದ್ಯೋಗ | ವ್ಯವಸಾಯ | ಪ್ರ.ವ.ಬೋ | |
| ವಾಸಸ್ಥಳ | ಬೈಕೆರೆ ಗ್ರಾಮ | ದಿನಾಂಕಃ 13.08.2024 | |

**ಸಾಕ್ಷಿಗೆ ವಿ ಸಿ ಮುಖಾಂತರ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಸಾಕ್ಷಿಯು ಅಮಾನತ್ತು ಪಂಚನಾಮೆಯಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ 78 ಎಂದು, ಸಾಕ್ಷಿಯ ಸಹಿಯನ್ನು ನಿಪಿ 78ಸಿ ಎಂದು ಗುರುತಿಸಲಾಯಿತು. ಸುಮಾರು 10 ವರ್ಷಗಳ ಹಿಂದೆ ಪೊಲೀಸರು ನಗರ ಠಾಣೆಯಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದರು. ನಿಪಿ 78 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.

**ಪಾಟೀ ಸವಾಲುಃ <u>ಮಾನ್ಯ ಸ ಸ ಅ ರವರಿಂದ</u>**

ದಿಃ *19-11-2009* ರಂದು ಸಕಲೇಶಪುರದ ಬಿ.ಎಂ ರಸ್ತೆಯಲ್ಲಿರುವ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸೇರಿದಂತೆ ಹಣ ದುರುಪಯೋಗವಾಗಿದೆ ಎಂದು ತಿಳಿಸಿ ಪಂಚನಾಮೆಗೆ ಬರಲು ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಬ್ಯಾಂಕಿನಲ್ಲಿ ನನ್ನ ಹಾಗೂ ಪಂಚರಾದ ಚಾಸಾ-*14* ಮತ್ತು *16* ರವರ ಸಮಕ್ಷಮ ಬೆಳಗ್ಗೆ *10.20* ರಿಂದ *12.00* ರವರೆಗೆ ಅಮಾನತ್ತು ಪಂಚನಾಮೆ ಜರುಗಿಸಿ ಸ್ಥಳದಲ್ಲಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಪಂಚನಾಮೆ ಕಾಲದಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಕಲೇಶಪುರ ಕಾರ್ಪೊರೇಷನ್ ಬ್ಯಾಂಕ್ ನಲ್ಲಿ ಖಾತೆ ನಂ. ಎಸ್ ಬಿ ***10524*** ಮತ್ತು ***14115, 13657*** ರ ಖಾತೆಗೆ ಸಂಬಂಧಿಸಿದಂತೆ ಮಳಲಿ ಗ್ರಾಮ ಪಂಚಾಯ್ತಿ ಕಛೇರಿಯಿಂದ ಹಣ ಡ್ರಾ ಮಾಡಿರುವ ಚೆಕ್ಕುಗಳನ್ನು ಮತ್ತು ಖಾತೆಗೆ ಸಂಬಂಧಿಸಿದಂತೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಮಾದರಿ ಸಹಿಗಳನ್ನು ಹಾಜರುಪಡಿಸಲು ಕೋರಿದ್ದು, ಅದರಂತೆ ಸದರಿ ದಾಖಲೆಗಳನ್ನು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ ***78*** ರ ಮೊದಲ ಪುಟದ ಕೆಳಗೆ ಇರುವ ***7*** ದಾಖಲೆಗಳ ವಿವರಗಳನ್ನು ಓದಿ ತಿಳಿಸಿ ಸದರಿ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡು ಒಂದು ಕವರ್ ನಲ್ಲಿ ಹಾಕಿ ಡಿ ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ ***78*** ರ ಪಂಚನಾಮೆಯಲ್ಲಿ ನಮೂದಿಸರುವ ಹಣ ಪಡೆದವರ ಹೆಸರು, ಚೆಕ್ಕಿನ ವಿವರ, ದಿನಾಂಕ,

ಚೆಕ್ ನಂಬರ್ ಹಾಗೂ ಮೊತ್ತವನ್ನು ಓದಿ ಹೇಳಿ  ಖಾತೆ ನಂ. *10524* ನಲ್ಲಿ *13* ಚೆಕ್ಕುಗಳು, ಖಾತೆ ನಂ. *14115* ರಲ್ಲಿ *27* ಚೆಕ್ಕುಗಳು ಹಾಗೂ ಖಾತೆ ನಂ *13657* ರಲ್ಲಿ *7* ಚೆಕ್ಕುಗಳನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಪ್ರತೀ ಖಾತೆಗೆ ಸೇರಿದ ಚೆಕ್ಕುಗಳನ್ನು ಪ್ರತ್ಯೇಕ ಕವರ್ ನಲ್ಲಿ ಹಾಕಿ ಡಿ ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂದರೆ ಸರಿಯಲ್ಲ. ನಿಪಿ *78* ರ ವಿಚಾರಗಳು ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ-** ಇಲ್ಲ

(ಸಾಕ್ಷಿಯನ್ನು ವಿ ಸಿ ಮುಖಾಂತರ ವಿಚಾರಣೆಗೆ ಒಳಪಡಿಸಿ ಅವರು ನೀಡಿದ ಸಾಕ್ಷ್ಯವನ್ನು ಲ್ಯಾಪ್ಟಾಪ್ ನಲ್ಲಿ ಬೆರಳಚ್ಚು ಮಾಡಿಸಿ ಸಾಕ್ಷಿಗೆ ಅದನ್ನು ಓದಿ ಹೇಳಲಾಯಿತು)

ಓ <u>ಹೇ ಕೇ ಸ ಇ ಒ</u>

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.